**ಕ್ರಿಮಿನಲ್ ಮಿಸ್. ನಂ.:152/2023**

ಪಿ.ಡಬ್ಲ್ಯೂ:01

(ಇಂದು ದಿನಾಂಕಃ **23-04-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು - ಎದುರುದಾರ ಪರ ಶ್ರೀ. N.M.N. ವಕೀಲರಿಂದ**

ನನ್ನ ವಿರುದ್ಧ ಎದುರುದಾರರು ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಎಮ್.ಸಿ.ನಂಬರ 5/2020 ದಾಖಲು ಮಾಡಿರುತ್ತಾರೆ ಎಂದರೆ ಸರಿ. ಅದರಲ್ಲಿ ನಾನು ಹಾಜರಾಗಿ ಎದುರುದಾರರು ನನ್ನನ್ನು ಅವರ ಜೊತೆ ಕರೆದುಕೊಂಡು ಹೋಗಬೇಕು ಎಂದು ಎದುರು ಮಾಗಣಿಯನ್ನು ಕೇಳಿರುತ್ತೇನೆ ಎಂದರೆ ಸರಿ. ದಿನಾಂಕಃ 19/07/2023 ರಂದು ಸದ್ರಿ ಪ್ರಕರಣವು ವಿಚಾರಣೆ ಆಗಿ ನನ್ನಿಂದ ಎದುರುದಾರರಿಗೆ ವಿಚ್ಛೇದನವನ್ನು ನೀಡಿರುತ್ತಾರೆ ಎಂದರೆ ಸರಿ. ನಾನು ಕೇಳಿದ ಎದುರು ಮಾಗಣಿಯನ್ನು ತೀರಸ್ಕತಗೊಳಿಸಿರುತ್ತಾರೆ. ಎಮ್.ಸಿ.ನಂಬರ 5/2020 ರಲ್ಲಿ ಆದ ಆದೇಶವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದ್ರಿ ದಾಖಲಾತಿಯು ಎಮ್.ಸಿ.ನಂಬರ 5/2020 ರಲ್ಲಿ ಆದ ಆದೇಶ ವಾಗಿದ್ದು ಸಾಕ್ಷಿಯು ಒಪ್ಪಿಕೊಂಡ ಮೇರೆಗೆ ಅದನ್ನು **Ex.R.1** ಎಂದು ಗುರುತಿಸಲಾಯಿತು.

Ex.R.1 ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದ ಕುರಿತಾಗಿ ನನಗೆ ಮಾಹಿತಿ ಇರುವುದಿಲ್ಲ. ಸದ್ರಿ ಪ್ರಕರಣದಲ್ಲಿ ಆದಾಯ ಹಾಗೂ ಬಾಧ್ಯತೆ ಪ್ರಮಾಣ ಪತ್ರವನ್ನು ಹಾಕಿರುತ್ತೇವೆ. ಎಮ್.ಸಿ.ನಂಬರ 5/2020 ರಲ್ಲಿ ನಾನು ಜೀವನಾಂಶವನ್ನು ಕೇಳಿರುತ್ತೇನೆ. ನಾನು ಹಿರಿಯ ನ್ಯಾಯಾದೀಶರ

ನ್ಯಾಯಾಲಯದ ತಿಂಗಳಿಗೆ ರೂ. 25000/- ಕೋರಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಅಲ್ಲಿ ನನಗೆ ಹಾಗೂ ಮಗುವಿಗೆ ತಿಂಗಳಿಗೆ 10 ಸಾವಿರದಂತೆ ಪ್ರಕರಣ ಮುಗಿಯುವವರೆಗೆ ನೀಡಬೇಕು ಎಂದು ಆದೇಶ ಆಗಿರುತ್ತದೆ. ಷದ್ರಿ ಪ್ರಕರಣದಲ್ಲಿ ನನಗೆ ಎದುರುದಾರರು ತಿಂಗಳಿಗೆ 5 ಸಾವಿರ ದಂತೆ ಜೀವನಾಂಶ ವನ್ನು ನೀಡುತ್ತಿದ್ದರು. ನಾನು ಹಿರಿಯ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಯಾವುದೇ ಅರ್ಜಿಯನ್ನು ಸಲಿಲಸಲಿಲ್ಲ ಎಂದರೆ ಸಾಕ್ಷಿಯು ನನ್ನ ಮಗನ ಚಿಕಿತ್ಸೆಗಾಗಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ಹಿರಿಯ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಜೀವನಾಂಶಕ್ಕಾಗಿ ಯಾವುದೇ ಆದೇಶ ಆಗಿರದೇ ಈ ನ್ಯಾಯಾಲಯದಲ್ಲಿ ಆದೇಶ ಆಗಿರುತ್ತದೆ ಎಂದರೆ ಸರಿ.

**(ಈ ಹಂತದಲ್ಲಿ ಎದುರುದಾರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ

ಹೆ.ಪ್ರ.ದ.ನ್ಯಾ.ದಂ. ಕುಮಟಾ